ಕರ್ನಾಟಕ ಸರ್ಕಾರ

# ಮೀನುಗಾರಿಕೆ ನಿರ್ದೇಶನಾಲಯ

3ನೇ ಮಹಡಿ, ಪೋಡಿಯಂಬ್ಲಾಕ್, ವಿಶ್ವೇಶ್ವರಯ್ಯಕೇಂದ್ರ, ಡಾ|| ಬಿ. ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು – 560 001

ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ :dof-blr-ka@nic.in

==========================================

ಸಂ: DOF-TECH0BRS/03/2022-ಇ- 668008 ದಿನಾಂಕ :17 /02/2022

ಸುತ್ತೋಲೆ

**ವಿಷಯ:** ಪಿ.ಎಂ.ಎಂ.ಎಸ್.ವೈ ಯೋಜನೆಯನ್ನು ರಾಜ್ಯದಲ್ಲಿ ಸರ್ಮಪಕ ಅನುಷ್ಠಾನ ಸಂಬಂಧ ಜಾಗೃತ ಕೋಶ ಸೃಜಿಸುವ ಬಗ್ಗೆ

******

ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖೆಯ ಮಹತ್ವಕಾಂಕ್ಷಿ ಯೋಜನೆಯಾದ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯನ್ನು ಸಮರ್ಪಕವಾಗಿ ರಾಜ್ಯದಲ್ಲಿ ಅನುಷ್ಠಾನ ಮಾಡುವ ಸಂಬಂಧ ಯೋಜನೆಯ ಅನುಷ್ಠಾನದಲ್ಲಿ ಆಗುವ ಲೋಪ ದೋಷಗಳು, ಕುಂದು ಕೊರತೆಗಳು ಮತ್ತು ಅವ್ಯವಹಾರಗಳನ್ನು ತಡೆಯಲು ರಾಜ್ಯ ಮತ್ತು ವಲಯ ಮಟ್ಟದಲ್ಲಿ ಜಾಗೃತ ಕೋಶವನ್ನು ಸೃಜಿಸುವ ಅವಶ್ಯಕತೆ ಇರುತ್ತದೆ. ಈ ಹಿನ್ನಲೆಯಲ್ಲಿ ಸದರಿ ಕೋಶವನ್ನು ಕೆಳಕಂಡ ಅಧಿಕಾರಿಗಳನ್ನು ಒಳಗೊಂಡಂತೆ ಸೃಜಿಸಲಾಗಿದೆ.

<u>ರಾಜ್ಯ ಮಟ್ಟದಲ್ಲಿ</u>

1. ಮೀನುಗಾರಿಕೆ ಅಪರ ನಿರ್ದೇಶಕರು(ಒಳನಾಡು)- ಅಧ್ಯಕ್ಷರು
2. ಮೀನುಗಾರಿಕೆ ಉಪ ನಿರ್ದೇಶಕರು - ಸದಸ್ಯರು
3. ಮೀನುಗಾರಿಕೆ ಸಹಾಯಕ ನಿರ್ದೇಶಕರು-ಸದಸ್ಯರು

<u>ವಲಯ ಮಟ್ಟದಲ್ಲಿ</u>

1. ಆಯಾ ವಲಯದ ಮೀನುಗಾರಿಕೆ ಜಂಟಿ ನಿರ್ದೇಶಕರು-ಅಧ್ಯಕ್ಷರು
2. ಅವ್ಯವಹಾರ/ತನಿಖೆ ನಡೆಯುತ್ತಿರುವ ಜಿಲ್ಲೆಯ ಮೀನುಗಾರಿಕೆ ಉಪ ನಿರ್ದೇಶಕರನ್ನು ಹೊರತು ಪಡಿಸಿ ಆಯಾ ವಲಯದ ಬೇರೆ ಜಿಲ್ಲೆಯ ಮೀನುಗಾರಿಕೆ ಉಪನಿರ್ದೇಶಕರು - ಸದಸ್ಯರು
3. ಅವ್ಯವಹಾರ/ತನಿಖೆ ನಡೆಯುತ್ತಿರುವ ಜಿಲ್ಲೆ ಮೀನುಗಾರಿಕೆ ಸಹಾಯಕ ನಿರ್ದೇಶಕರನ್ನು ಹೊರತು ಪಡಿಸಿ ಆಯಾ ವಲಯದ ಬೇರೆ ಜಿಲ್ಲೆಯ ಮೀನುಗಾರಿಕೆ ಸಹಾಯಕ ನಿರ್ದೇಶಕರು- ಸದಸ್ಯರು
   ವಿ.ಸೂ-ಆಯಾ ವಲಯದ ಮೀನುಗಾರಿಕೆ ಜಂಟಿ ನಿರ್ದೇಶಕರುಗಳು ಮೀನುಗಾರಿಕೆ ಉಪ ನಿರ್ದೇಶಕರನ್ನು ಹಾಗೂ ಮೀನುಗಾರಿಕೆ ಸಹಾಯಕ ನಿರ್ದೇಶಕರನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

ಸದರಿ ಜಾಗೃತ ಕೋಶವು ಸುಗಮವಾಗಿ ಕರ್ತವ್ಯ ನಿರ್ವಹಿಸಲು ಅನುವಾಗುವಂತೆ ಸದರಿ ಕೋಶಕ್ಕೆ ಕೆಳಕಂಡ ಕರ್ತವ್ಯ ಮತ್ತು ಅಧಿಕಾರಗಳನ್ನು ನಿಗದಿಪಡಿಸಿ ಆದೇಶಿಸಲಾಗಿದೆ.

1. ಜಾಗೃತ ಕೋಶವು ಇಲಾಖೆಯ ಅಧೀನ ಕಚೇರಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸತಕ್ಕದು.

2. ಜಾಗೃತ ಕೋಶವು ಇಲಾಖೆಯ ಅಧೀನ ಕಚೇರಿಗಳಿಗೆ ಆಗಾಗ್ಗೆ ಭೇಟಿ ನೀಡಿ ಪಿ.ಎಂ.ಎಂ.ಎಸ್.ವೈ ಯೋಜನೆಗಳ ಕುರಿತು ಪರಿಶೀಲಿಸಿ ನ್ಯೂನತೆಗಳ ಬಗ್ಗೆ ಮೀನುಗಾರಿಕೆ ನಿರ್ದೇಶನಾಲಯಕ್ಕೆ ವರದಿ ಮಾಡುವುದು .

3. ಪಿ.ಎಂ.ಎಂ.ಎಸ್.ವೈ ಯೋಜನೆಯ ಅನುಷ್ಠಾನದ ಕುರಿತು ಸಾರ್ವಜನಿಕರಿಂದ / ಜನಪ್ರತಿನಿಧಿಗಳಿಂದ ಮತ್ತು ಸರ್ಕಾರದಿಂದ ಸ್ವೀಕೃತವಾಗುವ ದೂರುಗಳ ಕುರಿತು ಕೂಲಂಕುಷವಾಗಿ ಪರಿಶೀಲಿಸುವುದು / ತನಿಖೆ ನಡೆಸಿ ಅಭಿಪ್ರಾಯದೊಂದಿಗೆ ಸೂಕ್ತ ಕ್ರಮಕ್ಕಾಗಿ ಮೀನುಗಾರಿಕೆ ನಿರ್ದೇಶನಾಲಯಕ್ಕೆ ವರದಿ ನೀಡುವುದು.

4. ರಾಜ್ಯದಲ್ಲಿ ಪಿ.ಎಂ.ಎಂ.ಎಸ್.ವೈ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ಗುಣಮಟ್ಟ ಖಾತರಿಪಡಿಸಿಕೊಳ್ಳುವ ಬಗ್ಗೆ ಪರಿಶೀಲನೆ ಮಾಡುವುದು ಹಾಗೂ ಅಗತ್ಯ ಕಂಡು ಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಶಿಫಾರಸ್ಸು ಮಾಡುವುದು.

5. ಪಿ.ಎಂ.ಎಂ.ಎಸ್.ವೈ ಯೋಜನೆ ಮತ್ತು ಕಾಮಗಾರಿಗಳನ್ನು ಮಾರ್ಗಸೂಚಿಗನುಗುಣವಾಗಿ ಅನುಷ್ಠಾನಗೊಳಿಸಿರುವ ಬಗ್ಗೆ ಪರಿಶೀಲಿಸುವುದು.

6. ಜಾಗೃತ ಕೋಶವು ಪಿ.ಎಂ.ಎಂ.ಎಸ್.ವೈ ಯೋಜನೆಯ ಸಮರ್ಪಕ ಅನುಷ್ಠಾನ ಹಾಗೂ ನ್ಯೂನತೆಗಳ ಸರಿಪಡಿಸುವಿಕೆಯ ಬಗ್ಗೆ ಒತ್ತು ನೀಡುವುದು ಮತ್ತು ಅನುಷ್ಠಾನದಲ್ಲಿ ಉದಾಸೀನತೆ, ನಿರ್ಲಕ್ಷತೆ ಮಾರ್ಗಸೂಚಿಗಳ ಉಲ್ಲಂಘನೆ ಹಾಗೂ ಹಣ ದುರುಪಯೋಗವಾಗಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿರ್ದೇಶನಾಲಯಕ್ಕೆ ಶಿಫಾರಸ್ಸು ಮಾಡುವುದು.

7. ಜಾಗೃತ ಕೋಶವು ಆಯಾ ತಿಂಗಳಲ್ಲಿ ಕೈಗೊಂಡ ಪ್ರವಾಸ, ತಪಾಸಣೆ ಮತ್ತಿತರ ಕಾರ್ಯಗಳ ವಿವರಗಳುಳ್ಳ ದಿನಚರಿಯನ್ನು ಪ್ರತಿ ತಿಂಗಳ 10 ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.

8. ವಲಯ ಮಟ್ಟದಲ್ಲಿ ಪಿ.ಎಂ.ಎಂ.ಎಸ್.ವೈ ಯೋಜನೆಗಳನ್ನು ಮಾರ್ಗಸೂಚಿಗನುಗುಣವಾಗಿ ಅನುಷ್ಠಾನಗೊಳಿಸಲು ವಿಫಲವಾದಲ್ಲಿ ಆಯಾ ವಲಯದ ಮೀನುಗಾರಿಕೆ ಜಂಟಿ ನಿರ್ದೇಶಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಜವಬ್ದಾರರನ್ನಾಗಿಸಲಾಗುವುದು.

9. ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ / ಸೂಚನೆಗಳನ್ನು ಪಾಲಿಸುವುದು.

ಮೀನುಗಾರಿಕೆ ನಿರ್ದೇಶಕರ ಪರವಾಗಿ